**ದಿಃ 19.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ. ಎಸ್ ಎಸ್ ವಕೀಲರಿಂದಃ**

ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸತ್ಯದಿಂದ ಕೂಡಿರುತ್ತವೆ. ಕೆಎ-09-ಇಜೆಡ್ -3089 ರ ಮಾಲೀಕರು ನನ್ನ ಗಂಡ ಇರುತ್ತಾರೆ. ಸದರಿ ವಾಹನಕ್ಕೆ ಸಂಬಂಧಿಸಿದ ವಿಮೆ ಮತ್ತು ನನ್ನ ಗಂಡನ ಚಾಲನಾ ಪರವಾನಗಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಪೊಲೀಸರು ತನಿಖೆಯನ್ನು ಮಾಡಿ ಅಂತಿಮ ವರದಿ ಸಲ್ಲಿಸುವಾಗ ನನ್ನ ಗಂಡನನ್ನು 1 ನೇ ಆರೋಪಿಯನ್ನಾಗಿ ಮಾಡಿದ್ದಾರೆ ಎಂದರೆ ಸರಿ. 1 ನೇ ಎದುರುದಾರರು ತಮ್ಮ ಲಾರಿ ನಂ. ಕೆಎ-17-ಬಿ-2498 ನ್ನು ರಸ್ತೆಯ ಎಡಬದಿಯಲ್ಲಿ ನಿಲ್ಲಿಸಿದ್ದರು ಎಂದರೆ ಸರಿಯಲ್ಲ. ಹೆಚ್ ಸಿ ಶಿವಲಿಂಗಪ್ಪ ಎನ್ನುವವರು ನನ್ನ ಮಾವ ಎಂದರೆ ಸರಿ. ನನ್ನ ಮಾವನವರೇ ದೂರನ್ನು ಕೊಟ್ಟಿದ್ದಾರೆ ಎಂದರೆ ಸರಿ. ನನ್ನ ಮಾವ ದೂರಿನಲ್ಲಿ ಏನು ಬರೆದಿರುತ್ತಾರೆ ಎಂದು ನಾನು ಓದಿದ್ದೇನೆ. ದೂರಿನಲ್ಲಿ ರಸ್ತೆಯ ಪಕ್ಕದಲ್ಲಿ ಲಾರಿಯನ್ನು ನಿಲ್ಲಿಸಿದ್ದರು ಎಂದು ಹೇಳಿದ್ದಾರೆ ಎಂದರೆ ಸರಿ. ನನ್ನ ಗಂಡನಿಗೆ ಸಾಕಷ್ಟು ಆದಾಯ ಇತ್ತು ಮತ್ತು ಅವರು ಸೆಕ್ಯೂರಿಟಿ ಗಾರ್ಡ್ ಎಂದು ಕೆಲಸ ಮಾಡುತ್ತಿದ್ದರು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೇನೆ. ಅಪಘಾತ ಆಯಿತು ಎಂದು ಹೇಳುವ ಕಾಲಕ್ಕೆ 1 ನೇ ಎದುರುದಾರರಿಗೆ ಚಾಲನಾ ಪರವಾನಗಿ ಇತ್ತು ಎಂದರೆ ಸರಿ. ಅದೇ ರೀತಿ ಸದರಿ ಲಾರಿಗೆ ವಿಮೆ ಚಾಲ್ತಿಯಲ್ಲಿತ್ತು ಎಂದರೆ ಸರಿ. 1 ನೇ ಎದುರುದಾರರು ರಸ್ತೆಯ ನಿಯಮಾವಳಿಗಳನ್ನು ಪಾಲಿಸದೇ ತಮ್ಮ ಲಾರಿಯನ್ನು ನಿರ್ಲಕ್ಷ್ಯತನದಿಂದ ರಸ್ತೆಯ ಮಧ್ಯದಲ್ಲಿ ನಿಲ್ಲಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ತಪ್ಪಿನಿಂದ ಅಪಘಾತ ಆಗಿದ್ದರಿಂದ 1 ನೇ ಎದುರುದಾರರು ನನಗೆ ಪರಿಹಾರವನ್ನು ಕೊಡಲು ಬಾಧ್ಯಸ್ಥರು ಅಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ. ಎ ಎಂ ವಿ ವಕೀಲರಿಂದಃ

ನಾನು ಎಸ್ ಎಸ್ ಎಲ್ ಸಿ ವ್ಯಾಸಂಗ ಮಾಡಿರುತ್ತೇನೆ. ನಿಪಿ.27 ರ ಪ್ರಕಾರ ನನ್ನ ಗಂಡನ ಜನ್ಮ ದಿನಾಂಕ 29.06.1977 ಎಂದರೆ ಸರಿ. ಅಪಘಾತದ ಕಾಲಕ್ಕೆ ನಿಪಿ.27 ರ ಪ್ರಕಾರ ನನ್ನ ಗಂಡನಿಗೆ 44 ವರ್ಷ ವಯಸ್ಸು ಆಗಿತ್ತು ಎಂದರೆ ಸರಿ. ಅಪಘಾತದ ಕಾಲಕ್ಕೆ ನನ್ನ ಗಂಡ ಚಲಾಯಿಸುತ್ತಿದ್ದ ಮೋಟರ್ ಸೈಕಲ್ ಗೆ ಅವರೇ ಮಾಲೀಕರು ಆಗಿದ್ದರು. ಅಪಘಾತದ ಕಾಲಕ್ಕೆ ನನ್ನ ಗಂಡ

ಚಲಾಯಿಸುತ್ತಿದ್ದ ಮೋಟರ್ ಸೈಕಲ್ ಗೆ ವಿಮೆ ಇರಲಿಲ್ಲ ಎಂದರೆ ಸರಿ. ನ್ಯಾಯಾಲಯದಿಂದ ಆದೇಶವನ್ನು ಪಡೆದು ಪೊಲೀಸ್ ಠಾಣೆಯಿಂದ ನನ್ನ ಗಂಡನ ಮೋಟರ್ ಸೈಕಲ್ ನ್ನು ಬಿಡಿಸಿಕೊಂಡಿದ್ದೇನೆ ಎಂದರೆ ಸರಿ. ಈ ಅರ್ಜಿಯನ್ನು ದಾಖಲಿಸಿದ ಕಾಲಕ್ಕೆ ನನ್ನ ಗಂಡನ ತಂದೆ ತಾಯಿಯನ್ನು ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ ಸರಿ. ನಾನು ಈ ಅರ್ಜಿಯನ್ನು ಸಲ್ಲಿಸಿದ 1 ವರ್ಷದ ನಂತರ ನನ್ನ ಗಂಡನ ತಂದೆ ತಾಯಿ ತಮ್ಮನ್ನು ಸಹ ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಸೇರಿಸುವಂತೆ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ಹೆಚ್ಚಿನ ಬಡ್ಡಿಯನ್ನು ಪಡೆಯುವ ಉದ್ದೇಶದಿಂದ ಅರ್ಜಿ ಸಲ್ಲಿಸುವಾಗ ಸರಿಯಾಗಿ ಮಾಹಿತಿಯನ್ನು ಕೊಡದೇ ಪ್ರಕರಣ ದಾಖಲಿಸಿದ್ದೆ ಎಂದರೆ ಸರಿಯಲ್ಲ. ನಾನು 3 ಮತ್ತು 4 ನೇ ಎದುರುದಾರರ ಆಧಾರ್ ಕಾರ್ಡಗಳನ್ನು ಹಾಜರಿಸಿಲ್ಲ ಎಂದರೆ ಸಾಕ್ಷಿಯು ನಾನು ಹಾಜರಿಸುವುದಿಲ್ಲ ಎಂದು ನುಡಿಯುತ್ತಾರೆ. 3 ಮತ್ತು 4 ನೇ ಎದುರುದಾರರ ತಾವು ಸಹ ಮೃತ ನಾಗರಾಜ್ ರವರ ಕಾನೂನುಬದ್ದ ವಾರಸುದಾರರು ಎಂದು ಹೇಳಿದ್ದು ನಾನು ನ್ಯಾಯಾಲಯಕ್ಕೆ ಕಾನೂನುಬದ್ದ ವಾರಸುದಾರರ ಪ್ರಮಾಣ ಪತ್ರವನ್ನು ಹಾಜರಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ. 4 ನೇ ಎದುರುದಾರರು 6 ತಿಂಗಳ ಹಿಂದೆ ಮೃತಪಟ್ಟಿರುತ್ತಾರೆ. ನನ್ನ ಗಂಡ ಸೆಕ್ಯೂರಿಟಿ ಕೆಲಸ ಮಾಡುತ್ತಿದ್ದರು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರಿಸಿಲ್ಲ ಎಂದರೆ ಸರಿ.

ಚನ್ನಗಿರಿ-ಚಿತ್ರದುರ್ಗ ರಾಷ್ಟ್ರೀಯ ಹೆದ್ದಾರಿ-13 ರಸ್ತೆಯ ಅಗಲ 120 ಅಡಿ ಇರುತ್ತದೆ ಎಂದರೆ ಸಾಕ್ಷಿಯು ಕಡಿಮೆ ಇರುತ್ತದೆ ಎಂದು ನುಡಿಯುತ್ತಾರೆ. ಅಪಘಾತ ಆದ ಸ್ಥಳದ ಅಕ್ಕ ಪಕ್ಕದಲ್ಲಿ ಜಮೀನುಗಳು ಇರುತ್ತವೆ ಎಂದರೆ ಸರಿ. ಅಪಘಾತದ ಸ್ಥಳದ ಹತ್ತಿರ ನೇರವಾದ ರಸ್ತೆ ಇರುತ್ತದೆ ಎಂದರೆ ಸರಿ. ಅಪಘಾತ ಆದ ಸ್ಥಳದಲ್ಲಿ 4 ಚಕ್ರಗಳ 3 ವಾಹನಗಳು ಹೋಗುವಷ್ಟು ರಸ್ತೆ ಅಗಲ ಇರುತ್ತದೆ ಎಂದರೆ ಸಾಕ್ಷಿಯು 2 ವಾಹನಗಳು ಹೋಗುವಷ್ಟು ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ.5 ರಲ್ಲಿ ಪೊಲೀಸರು 40 ಅಡಿ ಅಗಲದ ರಸ್ತೆ ಇರುತ್ತದೆ ಎಂದು ಹೇಳಿರುತ್ತಾರೆ ಎಂದರೆ ಸರಿ. ಲಾರಿ ಸುಮಾರು 10 ರಿಂದ 15 ಅಡಿ ಅಗಲ ಇರುತ್ತದೆ ಎಂದರೆ ಸರಿ. 40 ಅಡಿಯಲ್ಲಿ ಸುಮಾರು 20 ಅಡಿಯಷ್ಟು ರಸ್ತೆಯನ್ನು ತೆಗೆದರು ಸಹ ಇನ್ನು 20 ಅಡಿಯಷ್ಟು ರಸ್ತೆ ಉಳಿಯುತ್ತದೆ ಎಂದರೆ ಸರಿ. ಬೈಕ್ ಓಡಾಡಲು 3 ರಿಂದ 4 ಅಡಿ ರಸ್ತೆ ಅಗಲ ಇದ್ದರೆ ಸಾಕಾಗುತ್ತದೆ ಎಂದರೆ ಸರಿ. 20 ಅಡಿಯಷ್ಟು ರಸ್ತೆ ಅಗಲ ಇದ್ದರು ಸಹ ನನ್ನ ಗಂಡನೇ ತನ್ನ ನಿರ್ಲಕ್ಷ್ಯತನದಿಂದ ಬೈಕನ್ನು ಚಲಾಯಿಸಿ ಅಪಘಾತ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರು ತಯಾರಿಸಿದ ನಕಾಶೆ ನಮಗೆ ವ್ಯತಿರಿಕ್ತ ಆಗುತ್ತದೆ ಎನ್ನುವ ಉದ್ದೇಶದಿಂದ ಅದನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ.8 ರಲ್ಲಿ ನನ್ನ ಗಂಡ ಚಲಾಯಿಸುತ್ತಿದ್ದ ಮೋಟರ್ ಸೈಕಲ್ ನ ಮುಂಭಾಗ ಚೆಸ್ಸಿ ಸಂಪೂರ್ಣ ಜಖಂ ಆಗಿರುತ್ತದೆ ಎಂದರೆ ಸರಿ. ಪೊಲೀಸ್ ದಾಖಲೆಗಳ

ಪ್ರಕಾರ ನನ್ನ ಗಂಡನೇ ಅಪಘಾತ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡನ ತಪ್ಪಿನಿಂದ ಅಪಘಾತ ಆಗಿಲ್ಲ ಎಂದು ನಾನು ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ದೂರು ಸಲ್ಲಿಸಿಲ್ಲ ಎಂದರೆ ಸರಿ. ನಿಪಿ.19 ನ್ನು ನಾನು ತಿಳಿದುಕೊಂಡಿರುತ್ತೇನೆ. ಸಾಕ್ಷಿ ಮುಂದುವರೆದು ನನ್ನ ಗಂಡ ವಿಮೆ ಇಲ್ಲದ ಗಾಡಿಯನ್ನು ಚಲಾಯಿಸಿದ್ದರಿಂದ ಅವರನ್ನು 1 ನೇ ಆರೋಪಿಯನ್ನಾಗಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಅಪಘಾತದ ನಂತರ ನನ್ನ ಗಂಡನನ್ನು ಚನ್ನಗಿರಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು. ಚನ್ನಗಿರಿ ಆಸ್ಪತ್ರೆಯವರು ಆಗುವುದಿಲ್ಲ ಎಂದು ಹೇಳಿದ್ದರಿಂದ ಶಿವಮೊಗ್ಗ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನಿಪಿ.1 ರ ಪ್ರಕಾರ ನನ್ನ ಗಂಡನಿಗೆ ದಿನಾಂಕ 19.06.2021 ರಲ್ಲಿ ಅಪಘಾತ ಆಗಿರುತ್ತದೆ ಎಂದು ಇರುತ್ತದೆ ಎಂದರೆ ಸರಿ. ನನ್ನ ಮಾವ ಟೈಪ್ ಮಾಡಿಸಿದ ದೂರನ್ನು ಪೊಲೀಸ್ ಠಾಣೆಗೆ ನೀಡಿರುತ್ತಾರೆ ಎಂದರೆ ಸರಿ. ನಿಪಿ.1 ರಲ್ಲಿ ಪೊಲೀಸರು ದೂರುದಾರರು ಬೆಳಗ್ಗೆ 8.30 ಕ್ಕೆ ಬಂದು ದೂರು ನೀಡಿರುತ್ತಾರೆ ಎಂದು ನಮೂದಿಸಿದ್ದಾರೆ ಎಂದರೆ ಸರಿ. ನಿಪಿ.6 ರ ಪ್ರಕಾರ ನನ್ನ ಮಾವನವರೇ ಯಾವುದೇ ಜಖಂ ಆಗಿಲ್ಲ ಎಂದು ಕ್ಯಾಂಟರ್ ಲಾರಿಯನ್ನು ಗುರುತಿಸಿರುತ್ತಾರೆ ಎಂದರೆ ಸರಿ. ಅಪಘಾತದ ನಂತರ ಲಾರಿ ಚಾಲಕನೇ ನನ್ನ ಗಂಡನನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ಪೊಲೀಸರು ಹೆದ್ದಾರಿಯಲ್ಲಿ ಹೆದ್ದಾರಿ ವಾಹನ ಎಂದು ಬಿಟ್ಟಿರುತ್ತಾರೆ ಎಂದರೆ ಸರಿ. ನಿಪಿ.11 ರಲ್ಲಿ ನನ್ನ ಗಂಡನನ್ನು ಯಾವ ವಾಹನದಲ್ಲಿ ಕರೆದುಕೊಂಡು ಬಂದಿರುತ್ತಾರೆ ಎಂದು ಹೇಳಿರುವುದು ಸತ್ಯ ಇರುತ್ತದೆ. ನನ್ನ ಗಂಡ ಚಲಾಯಿಸುತ್ತಿದ್ದ ಮೋಟರ್ ಸೈಕಲ್ ಗೆ ವಿಮೆ ಇಲ್ಲದ ಕಾರಣ 1 ದಿನ ತಡವಾಗಿ ಎಲ್ಲಾ ದಾಖಲೆಗಳು ಇರುವ ಲಾರಿಯ ಮೇಲೆ ಪೊಲೀಸರು ಹಾಗೂ ಸಾಕ್ಷಿದಾರರ ಜೊತೆ ಶಾಮೀಲಾಗಿ ಸುಳ್ಳು ದೂರನ್ನು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ತಿಂಗಳಿಗೆ 50 ಸಾವಿರ ಆದಾಯ ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಗಂಡನ ಚಿಕಿತ್ಸೆಗೆ ಮತ್ತು ಶವ ಸಂಸ್ಕಾರಕ್ಕೆಂದು ತಲಾ 1 ಲಕ್ಷ ಹಣ ಖರ್ಚಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಚಲಾಯಿಸುತ್ತಿದ್ದ ಮೋಟರ್ ಸೈಕಲ್ ಗೆ ವಿಮೆ ಇಲ್ಲದೇ ಇರುವುದರಿಂದ ಯಾವುದೇ ಪರಿಹಾರ ಬರುವುದಿಲ್ಲ ಎನ್ನುವ ಉದ್ದೇಶದಿಂದ ಲಾರಿಯನ್ನು ಈ ಪ್ರಕರಣದಲ್ಲಿ ಸೇರಿಸಿದ್ದೇವೆ ಎಂದರೆ ಸರಿಯಲ್ಲ. 1 ನೇ ಎದುರುದಾರನಿಗೆ ಚಾಲನಾ ಪರವಾನಗಿ, ಲಾರಿಗೆ ಎಫ್ ಸಿ ಮತ್ತು ವಿಮೆ ಇಲ್ಲದೇ ಇರುವುದರಿಂದ 2 ನೇ ಎದುರುದಾರರು ನಮಗೆ ಪರಿಹಾರವನ್ನು ಕೊಡಲು ಬಾಧ್ಯಸ್ಥರು ಅಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಬಿ ಪಿ ಎಲ್ ಕಾರ್ಡ್ ಇರುತ್ತದೆ. ಬಿ ಪಿ ಎಲ್ ಕಾರ್ಡ್ ಪಡೆಯುವ ಸಮಯದಲ್ಲಿ ಸರ್ಕಾರಕ್ಕೆ ನೀಡಿದ ಮಾಹಿತಿ ಸತ್ಯದಿಂದ ಕೂಡಿದೆ. ಸದರಿ ಅರ್ಜಿಯನ್ನು ಕಾಲ ಪರಿಮಿತಿ ಮೀರಿ ದಾಖಲಿಸಿದ್ದರಿಂದ

ಅರ್ಜಿಯಲ್ಲಿ ಹೇಳಿರುವಂತೆ ಪರಿಹಾರ ಪಡೆಯಲು ಬಾಧ್ಯಸ್ಥರು ಅಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 3 ನೇ ಎದುರುದಾರರ ಪರ ಶ್ರೀ. ವಿ ಆರ್ ಆರ್ ವಕೀಲರಿಂದಃ</u>**

3 ನೇ ಎದುರುದಾರರು ನನ್ನ ಮಾವ ಮತ್ತು ಮೃತ 4 ನೇ ಎದುರುದಾರರು ನನ್ನ ಅತ್ತೆ ಎಂದರೆ ಸರಿ. 4 ನೇ ಎದುರುದಾರರ ಮರಣ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿ. 3 ಮತುತ 4 ನೇ ಎದುರುದಾರರು ತಾವು ಸಹ ಮೃತ ನಾಗರಾಜನ ವಾರಸುದಾರರು ಇದ್ದು ತಮ್ಮನ್ನು ಈ ಅರ್ಜಿಯಲ್ಲಿ ಸೇರಿಸುವಂತೆ ಅರ್ಜಿ ಸಲ್ಲಿಸುವ ಸಮಯದಲ್ಲಿ ಪಡಿತರ ಚೀಟಿ ಮತ್ತು ಆಧಾರ್ ಕಾರ್ಡ್ ಹಾಜರಿಸಿದ್ದರು ಎಂದರೆ ಸರಿ. ನಾವು ಎಷ್ಟು ಪರಿಹಾರವನ್ನು ಪಡೆಯಲು ಬಾಧ್ಯಸ್ಥರು ಇರುತ್ತೇವೊ 3 ನೇ ಎದುರುದಾರರು ಸಹ ಅಷ್ಟೆ ಬಾಧ್ಯಸ್ದರು ಇರುತ್ತಾರೆ ಎಂದರೆ ಸರಿ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.

**MVC.No. <u>561/2022</u>**
**<u>ಪಿ. ಡಬ್ಲ್ಯೂ: 01</u>**
**<u>MVC.No.</u>**
**<u>ಪಿ. ಡಬ್ಲ್ಯೂ: 01</u>**

**<u>ದಿಃ 23-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ. ಎದುರುದಾರರ ಪರ ವಕೀಲರಿಂದಃ</u>**

**1 ಮತ್ತು 2 ನೇ ಎದುರುದಾರರ ಪರ ಯಾವುದೇ ಪ್ರತಿನಿಧಿತ್ವ ಇರದೇ ಇದ್ದ ಕಾರಣ ಅವರ ಪರ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು .**

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.

**MVC.No. 561/2022**
**ಪಿ. ಡಬ್ಲ್ಯೂ: 01**
**MVC.No.**
**ಪಿ. ಡಬ್ಲ್ಯೂ: 01**

**ದಿಃ 23-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎದುರುದಾರರ ಪರ ವಕೀಲರಿಂದಃ**

**1 ಮತ್ತು 2 ನೇ ಎದುರುದಾರರ ಪರ ಯಾವುದೇ ಪ್ರತಿನಿಧಿತ್ವ ಇರದೇ ಇದ್ದ ಕಾರಣ ಅವರ ಪರ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು .**

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.

**MVC.No. 561/2022**
**ಪಿ. ಡಬ್ಲ್ಯೂ: 01**
**MVC.No.**
**ಪಿ. ಡಬ್ಲ್ಯೂ: 01**

**ದಿಃ 23-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎದುರುದಾರರ ಪರ ವಕೀಲರಿಂದಃ**

**1 ಮತ್ತು 2 ನೇ ಎದುರುದಾರರ ಪರ ಯಾವುದೇ ಪ್ರತಿನಿಧಿತ್ವ ಇರದೇ ಇದ್ದ ಕಾರಣ ಅವರ ಪರ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು .**

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.